I/456241/2023

**ಕರ್ನಾಟಕ ಸರ್ಕಾರ**
**ಅರಣ್ಯ ಇಲಾಖೆ**

**ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಹಾಗೂ ಆಯ್ಕೆ ಪ್ರಾಧಿಕಾರ ರವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು – 560003**

**ಅಧಿಸೂಚನೆ ಸಂಖ್ಯೆ: ಬಿ9/ನೇಮಕಾತಿ/ಸ್ಪೋರ್ಟ್ಸ್/ವಿವ-3/2017-18**
**ದಿನಾಂಕ: 17.01.2018ರಂತೆ ಸ್ಪೋರ್ಟ್ಸ್ ಕೋಟಾದಡಿ**
**10 ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ಹುದ್ದೆಗಳಿಗೆ ನೇರ ನೇಮಕಾತಿ**

# ಪ್ರಕಟಣೆ

ಈ ಕಛೇರಿ ಪ್ರಕಟಣೆ ದಿನಾಂಕ: 22.05.2023ನ್ನು ಮುಂದುವರೆಸುತ್ತಾ, ಅಧಿಸೂಚನೆ ಸಂಖ್ಯೆ: ಬಿ9/ನೇಮಕಾತಿ/ಸ್ಪೋರ್ಟ್ಸ್/ವಿವ-3/2017-18 ದಿನಾಂಕ:17.01.2018ರ ಅಧಿಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರಿಟ್ ಅರ್ಜಿ ಸಂಖ್ಯೆ: 6259/2021 (ಎಸ್-ಕೆಎಸ್ಎಟಿ) C/W ಸರ್ಕಾರವು ದಾಖಲಿಸಿದ ರಿಟ್ ಅರ್ಜಿ ಸಂಖ್ಯೆ: 10785/2020 (ಎಸ್-ಕೆಎಸ್ಎಟಿ) ಪ್ರಕರಣದಲ್ಲಿ ದಿನಾಂಕ: 07.07.2021ರಂದು ನೀಡಿರುವ ಅಂತಿಮ ಆದೇಶ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಅಪಜೀ 49 ಅಅಸೇ 2021, ದಿನಾಂಕ: 22.08.2022ರಲ್ಲಿನ ಅನುಮತಿಯಂತೆ ಸ್ಪೋರ್ಟ್ಸ್ ಕೋಟಾದಡಿ 10 ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ಹುದ್ದೆಗಳಿಗೆ 1:5 ಅಂತಿಮ ಆಯ್ಕೆ ಪಟ್ಟಿಯಲ್ಲಿನ ಎಲ್ಲಾ ಅಭ್ಯರ್ಥಿಗಳಿಗೆ ಮೂಲ ದಾಖಲೆಗಳ ಪರೀಕ್ಷೆ, ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ, ದೈಹಿಕ ತಾಳ್ವಿಕೆ ಪರೀಕ್ಷೆ ಹಾಗೂ ದೇಹ ದಾರ್ಢ್ಯತೆ ಪರೀಕ್ಷೆಗಳಿಗೆ ದಿನಾಂಕಗಳನ್ನು ನಿಗದಿಪಡಿಸಿ, ನಿಗದಿತ ದಿನಾಂಕ ಮತ್ತು ಸಮಯದಂದು **"ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಜಾರಕಬಂಡೆ ಅರಣ್ಯ ಸಂಕೀರ್ಣ, ಕಮ್ಮಗೊಂಡನಹಳ್ಳಿ, ಬೆಂಗಳೂರು – 560 015"**ರವರ ಸಮಕ್ಷಮ ಹಾಜರಾಗಲು ಸೂಚಿಸಿ, ಪ್ರಕಟಣೆಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಇಲಾಖಾ ವೆಬ್‌ಸೈಟ್‌ನಲ್ಲಿ ಈಗಾಗಲೇ ಪ್ರಕಟಿಸಲಾಗಿರುತ್ತದೆ.

ಅದರನ್ವಯ, 1:5 ಅಂತಿಮ ಆಯ್ಕೆ ಪಟ್ಟಿಯಲ್ಲಿನ ಎಲ್ಲಾ ಅಭ್ಯರ್ಥಿಗಳಿಗೆ ಮೂಲ ದಾಖಲೆಗಳ ಪರೀಕ್ಷೆ, ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ, ದೈಹಿಕ ತಾಳ್ವಿಕೆ ಪರೀಕ್ಷೆಯನ್ನು ದಿನಾಂಕ: 19.06.2023ರಂದು ಹಾಗೂ ದೇಹ ದಾರ್ಢ್ಯತೆ ಪರೀಕ್ಷೆಯನ್ನು ದಿನಾಂಕ: 05.07.2023ರಂದು ನಡೆಸಲಾಗಿದ್ದು, ವಿವರ ಈ ಕೆಳಕಂಡಂತಿದೆ.

| Sl. No. | Appln ID | Regn ID | Full Name of the Applicant | Date of Birth | Gender | Present/ Absent | Result |
|---|---|---|---|---|---|---|---|
| 1 | 7000038 | 1000213 | HARSHITH S | 05-11-1993 | MALE | Absent | - |
| 2 | 7000795 | 1004174 | SHASHANK J RAI | 19-03-1993 | MALE | Present | Qualified |
| 3 | 7000461 | 1002479 | JEEVITHA SACHIDANANDA | 27-03-1992 | FEMALE | Present | Disqualified |
| 4 | 7000439 | 1000377 | AJITH KUMAR | 12-05-1994 | MALE | Present | Disqualified |
| 5 | 7000321 | 1001813 | JANARDHAN T S | 31-08-1993 | MALE | Present | Disqualified |

ಮುಂದುವರೆದು, ಈ ಕಛೇರಿ ಅಧಿಸೂಚನೆ ಸಂಖ್ಯೆ: ಬಿ9/ನೇಮಕಾತಿ/ಸ್ಪೋರ್ಟ್ಸ್/ವಿವ-3/2017-18 ದಿನಾಂಕ:17.01.2018ರ ಕಂಡಿಕೆ 2.F(i) ರನ್ವಯ ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ, ದೈಹಿಕ ತಾಳ್ವಿಕೆ ಪರೀಕ್ಷೆ ಹಾಗೂ ದೇಹ ದಾರ್ಢ್ಯತೆ ಪರೀಕ್ಷೆಗಳಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳಿಗೆ ಮಾತ್ರ ಲಿಖಿತ ಪರೀಕ್ಷೆಯನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

| ಕ್ರ. ಸಂ. | ದಿನಾಂಕ ಮತ್ತು ಸಮಯ | ಪರೀಕ್ಷೆಯ ವಿವರ |
|---|---|---|
| 1 | 23.07.2023<br>ಬೆಳಿಗ್ಗೆ 11.00 ಗಂಟೆಗೆ | ಲಿಖಿತ ಪರೀಕ್ಷೆ – Aptitude Test (Objective Type)]<br>**ಸ್ಥಳ:** ಅರಣ್ಯ ಭವನ, 8ನೇ ಮಹಡಿ<br>ಮಲ್ಲೇಶ್ವರಂ 18ನೇ ಅಡ್ಡರಸ್ತೆ, ಬೆಂಗಳೂರು - 560003<br>*[ಲಿಖಿತ ಪರೀಕ್ಷೆಗೆ ಸಂಬಂಧಿಸಿದಂತೆ ಪಠ್ಯಕ್ರಮವನ್ನು ಈಗಾಗಲೇ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ಅದನ್ನು ಮತ್ತೊಮ್ಮೆ ಈ ಪ್ರಕಟಣೆಯೊಂದಿಗೆ ಲಗತ್ತಿಸಿ ಪ್ರಕಟಿಸಿದೆ.]* |

I/456241/2023

**ಸೂಚನೆ:**

1. *ನಿಗದಿತ ದಿನಾಂಕ ಮತ್ತು ಸಮಯದಂದು ಸದರಿ ಪರೀಕ್ಷೆಗೆ ಭಾಗವಹಿಸದೇ ಇದ್ದಲ್ಲಿ ಅಭ್ಯರ್ಥಿಯ ಅಭ್ಯರ್ಥಿತ್ವ ಸ್ವಯಂ ಚಾಲಿತವಾಗಿ ರದ್ದಾಗುತ್ತದೆ ಹಾಗೂ ಈ ಕುರಿತು ಯಾವುದೇ ರೀತಿಯ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.*
2. *ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ಹಾಜರಾಗುವಾಗ ಈ ಕೆಳಕಂಡ ಯಾವುದಾದರೂ ಒಂದು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.*
   - *(i) ಆಧಾರ್ ಕಾರ್ಡ್ (Aadhar Card)*
   - *(ii) ಪಾಸ್‌ಪೋರ್ಟ್ (Passport)*
   - *(iii) ಚಾಲನಾ ಪರವಾನಗಿ ಪತ್ರ (Driving License)*
   - *(iv) ಪ್ಯಾನ್ ಕಾರ್ಡ್ (PAN Card)*
   - *(v) ರಾಜ್ಯ ಸರ್ಕಾರ/ ಕೇಂದ್ರ ಸರ್ಕಾರ/ ಸಾರ್ವಜನಿಕ ಸ್ವಾಮ್ಯದ ಅಥವಾ ಸರ್ಕಾರದ ಅಧೀನಕ್ಕೆ ಒಳಪಟ್ಟ ಖಾಸಗಿ ಕಂಪನಿಗಳು ವಿತರಿಸಿರುವ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿ (Service ID Card)*
   - *(vi) ಸಾರ್ವಜನಿಕ ಬ್ಯಾಂಕ್‌ಗಳು/ ಅಂಚೆ ಕಛೇರಿಗಳು ವಿತರಿಸಿರುವ ಭಾವಚಿತ್ರ ಪಾಸ್‌ಪುಸ್ತಕ (Bank Pass Book with photograph)*
   - *(vii) ಭಾವಚಿತ್ರ ಸಮೇತ ನೋಂದಣಿಯಾಗಿರುವ ಸ್ವತ್ತಿನ ದಾಖಲಾತಿ ಪತ್ರ ಅಥವಾ ಪಟ್ಟಾ ಪುಸ್ತಕ (Pattas and Registered deeds with photograph)*
   - *(viii) ಭಾವಚಿತ್ರ ಸಮೇತ ಸಂಬಂಧಪಟ್ಟ ಪ್ರಾಧಿಕಾರಿಯವರು ವಿತರಿಸಿರುವ ಜಾತಿ ಪ್ರಮಾಣ ಪತ್ರ (Community Certificate with photograph)*
   - *(ix) ಮಾಜಿ ಸೈನಿಕ ಅಭ್ಯರ್ಥಿಗಳಿಗೆ ವಿತರಿಸಿರುವ ಪಿಂಚಣಿ ಪುಸ್ತಕ/ ಪಿಂಚಣಿ ಮಂಜೂರಾತಿ ಆಗಿರುವ ಆದೇಶ (Ex-servicemen's pension book/ pension payment order)*
   - *(x) ಎಂ.ಜಿ.ಎನ್.ಆರ್.ಇ.ಜಿ.ಎಸ್. ಇಂದ ನೀಡಿದ ಭಾವಚಿತ್ರವಿರುವ ಉದ್ಯೋಗ ಚೀಟಿ (MGNREGS – Job card with photograph)*
   - *(xi) ಎಲೆಕ್ಟೋರಲ್ ಫೋಟೋ ಗುರುತಿನ ಚೀಟಿ (EPIC)*
3. *ಅರಣ್ಯ ಇಲಾಖೆಯ ಅಧಿಕೃತ ವೆಬ್‌ಸೈಟ್ https://aranya.gov.in/ ರಲ್ಲಿ ನೇಮಕಾತಿ (Recruitment) ಶೀರ್ಷಿಕೆಯಡಿ ಪ್ರಕಟಿಸಲಾಗುತ್ತಿರುವ ಮಾಹಿತಿಯನ್ನು ಅಭ್ಯರ್ಥಿಗಳು ಕಾಲ ಕಾಲಕ್ಕೆ ವೀಕ್ಷಿಸುವುದು. ಇದಕ್ಕಾಗಿ ಬೇರೆ ಯಾವುದೇ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.*

**Signed by Rajiv Ranjan, Ifs**
**Date: 18-07-2023 19:11:07**

ದಿನಾಂಕ: 18.07.2023

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ಹಾಗೂ
ಅಧ್ಯಕ್ಷರು, ವಿಶೇಷ ನೇಮಕಾತಿ ಸಮಿತಿ